ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹೊನ್ನಾವರ.

ಸಿಸಿ ನಂಃ 610/2018

ಪಿ ಡಬ್ಲುಃ 03

ಸಿ ಡಬ್ಲುಃ 01

| | |
|---|---|
| ಸಾಕ್ಷಿದಾರರ ಹೆಸರು | ಆನಂದಮೂರ್ತಿ ಸಿ. |
| ತಂದೆಯ ಹೆಸರು | ಚಿಕ್ಕಣ್ಣ |
| ವಯಸ್ಸು | 39 |
| ಉದ್ಯೋಗ | ಪಿ. ಐ., ಚೆಸ್ಕಾಂ ಜಾಗ್ರತ ದಳ ಪೋಲಿಸ್ ಠಾಣೆ ಮೈಸೂರು |
| ವಾಸ್ತವ್ಯ | ಮೈಸೂರು |

ಸಾಕ್ಷಿಯನ್ನು ದಿನಾಂಕಃ 12-03-2024 ರಂದು ಕರೆಸಲಾಯಿತು ಮತ್ತು ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದಃ**

ನಾನು 2016 ರಿಂದ 2018 ರವರೆಗೆ ಹೊನ್ನಾವರ ಪೋಲಿಸ್ ಠಾಣೆಯಲ್ಲಿ ಪಿ. ಎಸ್. ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ 16.04.2017 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಮದ್ಯಾಹ್ನ 3 ಗಂಟೆ ಸಮಯದಲ್ಲಿ ಬಾತ್ಮಿದಾರರು ಫೋನ್ ಮೂಲಕ ಕರೆ ಮಾಡಿ ಕಡತೋಕಾ ಕ್ರಾಸ್ ಬಳಿ ಇರುವ ಶ್ರೀನಿವಾಸ ಶಂಕರ ಮಡಿವಾಳ ರವರ ಮನೆಯಲ್ಲಿ ಅಕ್ರಮವಾಗಿ ಲಾಟರಿ ವ್ಯವಹಾರ ನಡೆಸುತ್ತಿದ್ದಾರೆ ಎಂದು ಮಾಹಿತಿ ಬಂದಂತೆ ನಾನು ಸದ್ರಿ ವಿಚಾರವನ್ನು ಮೇಲಾಧಿಕಾರಿಗಳಿಗೆ ತಿಳಿಸಿ ಅವರ ಮಾರ್ಗದರ್ಶನ ಪಡೆದು ಸಿಬ್ಬಂದಿಗಳಾದ ಚಾಸಾ 6 ರಿಂದ 10 ರವರನ್ನು ಜೊತೆಗೆ ಕರೆದುಕೊಂಡು ಮಾಹಿತಿ ಬಂದ ಸ್ಥಳಕ್ಕೆ ಸುಮಾರ 3.45 ರ ಸಮಯಕ್ಕೆ ತಲುಪಿ ಸ್ವಲ್ಪ ದೂರ ನಮ್ಮ ವಾಹನ ನಿಲ್ಲಿಸಿ ಚಾಸಾ 8 ರವರ ಮೂಲಕ ಇಬ್ಬರು ಪಂಚರಾದ ಚಾಸಾ 2 ಮತ್ತು 3 ರವರನ್ನು ಬರಮಾಡಿಕೊಂಡು ಸದ್ರಿಯವರಿಗೆ ಮಾಹಿತಿ ಬಂದ ವಿಚಾರ ತಿಳಿಸಿ ಸ್ವಲ್ಪ ದೂರ ನಡೆದುಕೊಂಡು ಹೋಗಿ ವೀಕ್ಷಣೆ ಮಾಡಿದಾಗ ಶ್ರೀನಿವಾಸ ಶಂಕರ ಮಡಿವಾಳ ರವರ ಮನೆಯ ಹತ್ತಿರ ಕೆಲವು ಜನ ಸೇರಿಕೊಂಡು ಲಕ್ಕಿ ಡಿಪ್ ಆಟ ಆಡುತ್ತಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು ಅದಕ್ಕೆ ಸಂಬಂಧಿಸಿದ ವಸ್ತುಗಳು ಕೂಡ ಸ್ಥಳದಲ್ಲಿಯೇ ಇದ್ದವು. ಅದನ್ನು ಖಚಿತಪಡಿಸಿಕೊಂಡು ನಾವು ದಾಳಿ ಮಾಡಿದಾಗ ಕೆಲವು ಜನರು ಓಡಿಹೋಗಿರುತ್ತಾರೆ. ನಾನು ಮತ್ತು ಸಿಬ್ಬಂದಿಗಳು ಒಟ್ಟೂ 5 ಜನರನ್ನು ಹಿಡಿದಿದ್ದು ನಾನು ಹಿಡಿದ ವ್ಯಕ್ತಿಯ ಹೆಸರು ಕೇಳಲಾಗಿ ಶ್ರೀನಿವಾಸ ಶಂಕರ ಮಡಿವಾಳ ಎಂದು ತಿಳಿಸಿರುತ್ತಾರೆ. ಸದ್ರಿಯವರು ಲಕ್ಕಿ ಕೂಪನ್ ಮೂಲಕ ಸಾರ್ವಜನಿಕರಿಗೆ ಗಿಫ್ಟ ನೀಡುತ್ತಿರುವ ಬಗ್ಗೆ ಒಪ್ಪಿಕೊಂಡಿರುತ್ತಾರೆ. ಉಳಿದ ನಾಲ್ಕು ಜನರ ಹೆಸರು ನಾಗರಾಜ ದೇಶಬಂಢಾರಿ, ನಾಗೇಶ ನಾಯ್ಕ, ಮಂಜುನಾಥ ದೇಶಬಂಡಾರಿ ಮತ್ತು ತಿಮ್ಮಪ್ಪ ನಾಯ್ಕ ಆಗಿರುತ್ತದೆ. ಸ್ಥಳದಲ್ಲಿದ್ದ ಗೃಹಬಳಕೆ ವಸ್ತುಗಳಾದ ಮುದ್ದೆಮಾಲು 1 ರಿಂದ 19 ನ್ನು ಪಂಚನಾಮೆ ಮೂಲಕ ಪಂಚರ ಸಮಕ್ಷಮ ವಶಕ್ಕೆ ಪಡೆದಿರುತ್ತೇವೆ. ಸದ್ರಿ ಪಂಚನಾಮೆಯನ್ನು ಸಂಜೆ 4.20 ರಿಂದ 6.20 ರವರೆಗೆ ಜರುಗಿಸಿರುತ್ತೇವೆ. ಸದ್ರಿ

ಪಂಚನಾಮೆಯನ್ನು ಈಗಾಗಲೇ ನಿಪಿ 1 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ 1 ಬಿ ಎಂದು ಗುರುತಿಸಲಾಯಿತು. ನಂತರ ಠಾಣೆಯ ಬಂದು ವಶಕ್ಕೆ ಪಡೆದ ಸ್ವತ್ತುಗಳು, ಪಂಚನಾಮೆ ಮತ್ತು ಆರೋಪಿತರೊಂದಿಗೆ ಸರ್ಕಾರದ ಪರವಾಗಿ ದೂರನ್ನು ಚಾಸಾ 12 ರವರಿಗೆ ನೀಡಿರುತ್ತೇನೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 3 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 3 ಎ ಎಂದು ಗುರುತಿಸಲಾಯಿತು. ದಿಃ 23.06.2017 ರಂದು ನ್ಯಾಯಾಲಯದ ಆದೇಶದಂತೆ 1 ನೇ ಆರೋಪಿತನ ಮಧ್ಯಂತರ ವಶಕ್ಕೆ ಸ್ವತ್ತು ಪಟ್ಟಿ ಸಂಖ್ಯೆ 1 ರಿಂದ 15 ನ್ನು ನೀಡಿರುತ್ತೇನೆ. ಆಗ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸದ್ರಿ ಪಂಚನಾಮೆಯನ್ನು ಈಗಾಗಲೇ ನಿಪಿ 2 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ 2 ಬಿ ಎಂದು ಗುರುತಿಸಲಾಯಿತು.

ಸಾಕ್ಷಿ ನೀಲಿ ಬಣ್ಣದ ಬಕೇಟ್ ನೋಡಿ ಗುರುತಿಸಿದ್ದು ನೀಲಿ ಬಣ್ಣದ ಬಕೇಟ್ ಮತ್ತು ಅದರಲ್ಲಿ ಇರುವ ಪ್ಲಾಸ್ಟಿಕ್ ನಾಣ್ಯಗಳನ್ನು ಒಟ್ಟಾಗಿ ಎಂ ಒ 1 ಎಂದು, ಮೂರು ಪುಸ್ತಕಗಳನ್ನು ಕ್ರಮವಾಗಿ ಎಂ ಒ 2 ರಿಂದ 4 ಎಂದು ಗುರುತಿಸಲಾಯಿತು. ಸಾಕ್ಷಿ ಕಡತದಲ್ಲಿರುವ 2 ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ. 4 ಮತ್ತು ನಿಪಿ. 5 ಎಂದು ಗುರುತಿಸಲಾಯಿತು. ಸದ್ರಿ ದಿನ ನಾವು ಹಿಡಿದ 5 ಜನ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ 1, 2 ನೇ ಆರೋಪಿಯನ್ನು ನೋಡಿ ಗುರುತಿಸುತ್ತಾರೆ. 3 ರಿಂದ 5 ನೇ ಆರೋಪಿತರು ಗೈರು ಹಾಜರಾಗಿದ್ದು ಆರೋಪಿ ಪರ ವಕೀಲರು ಮಾಫಿ ಅರ್ಜಿ ಸಲ್ಲಿಸಿ ಗುರುತಿಸುವಿಕೆಯ ಬಗ್ಗೆ ತಕರಾರು ಇಲ್ಲ ಎಂದು ಹೇಳಿದ್ದರಿಂದ ಕ್ರಮವನ್ನು ಕೈಬಿಡಲಾಯಿತು.

**<u>ಪಾಟೀ ಸವಾಲುಃ ಶ್ರೀ ವಿ. ಆರ್. ಎನ್. ವಕೀಲರಿಂದಃ</u>**

ನನಗೆ 1 ನೇ ಆರೋಪಿಯ ವೈಯಕ್ತಿಕ ಪರಿಚಯ ಇದೆ. ಅವರು ಖಾಯಂ ಆಗಿ ನಮ್ಮ ಕಛೇರಿಗಳಿಗೆ , ಸರ್ಕಾರಿ ಕಛೇರಿಗಳಿಗೆ ಹೋಗಿ ಭ್ರಷ್ಟಾಚಾರದ ಬಗ್ಗೆ ವ್ಯವಹಾರ ನಡೆದರೆ ಲೋಕಾಯುಕ್ತಕ್ಕೆ ಪ್ರಕರಣ ದಾಖಲಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನೇ 1 ನೇ ಆರೋಪಿಯನ್ನು ಅನೇಕ ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ಮಾಡಿ ನೋಟಿಸು ನೀಡಿದ್ದೆ ಎಂದರೆ ನನಗೆ ನೆನಪಿಲ್ಲ. ಈ ಪ್ರಕರಣದ ಮೊದಲು ಸಿಪಿ ಐ ಕುಮಾರ ಸ್ವಾಮಿ ರವರ ಮೇಲೆ ಲೋಕಾಯುಕ್ತ ದಾಳಿಯಾಗಿತ್ತು ಎಂದರೆ ಸಾಕ್ಷಿ ಈ ಪ್ರಕರಣ ಆದ ಮೇಲೆ ಆಗಿತ್ತು ಎಂದು ನುಡಿಯುತ್ತಾರೆ. 1 ನೇ ಆರೋಪಿ ನಮ್ಮ ಸಿಬ್ಬಂದಿಗಳ ವಿರುದ್ಧ ಲೋಕಾಯುಕ್ತಕ್ಕೆ ದೂರು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಮಗೆ ಗುಪ್ತ ಮಾಹಿತಿ ಬಂದಿತ್ತು. ನಮಗೆ ಆ ಮಾಹಿತಿಯನ್ನು ನಮ್ಮ ಮೇಲಾಧಿಕಾರಿಗಳು ನೀಡಿರುವುದಿಲ್ಲ. ಮೊದಲು ನಾವು ಕಡತೋಕಾ ಕ್ರಾಸಿನ ಹಿಂದುಗಡೆ ನಿಂತಿದ್ದೆವು. ನಾವು ಈ ಪ್ರಕರಣದ ದಾಳಿ ಮಾಡಿದ್ದು ಕಡತೋಕಾ ಗ್ರಾಮವಾಗಿರುತ್ತದೆ. ಸದ್ರಿ ಸ್ಥಳ ಹೊನ್ನಾವರದಿಂದ ಚಂದಾವರಕ್ಕೆ ಹೋಗುವ ರಸ್ತೆಯ ಬಲಭಾಗಕ್ಕೆ ಬರುತ್ತದೆ. ನಾವು ಮುಖ್ಯ ರಸ್ತೆಯಿಂದ 50 ಮೀ ಒಳಗಡೆ ಹೋಗಿರುತ್ತೇವೆ. ಸ್ಥಳದಲ್ಲಿ ಮೂರು ನಾಲ್ಕು ಮನೆಗಳು ಇದ್ದವು. ನನಗೆ ಅದು 1 ನೇ ಆರೋಪಿಯ ಮನೆ ಎಂದು ಗೊತ್ತಿತ್ತು. ನಾವು ಮದ್ಯಾಹ್ನ 3.45 ರ ಸಮಯಕ್ಕೆ ಅವರ ಮನೆ ಮುಟ್ಟಿರುತ್ತೇವೆ. ಆಗ 1 ನೇ ಆರೋಪಿತನ ಮನೆ ಹತ್ತಿರ ಸುಮಾರು 15-20 ಜನರು ಇದ್ದರು. ಸ್ಥಳದಲ್ಲಿ ಮೈಕ್ ಇರಲಿಲ್ಲ. 1 ನೇ ಆರೋಪಿ ನಿಂತುಕೊಂಡು ಲಾಟರಿಯನ್ನು ನಡೆಸುತ್ತಿದ್ದ. ಸ್ಥಳದಲ್ಲಿ ಯಾವದೇ ಲಾಟರಿ ಟಿಕೆಟ್ ಇರಲಿಲ್ಲ. ಅದು ಲಕ್ಕಿ ಡಿಪ್ ಆದ ಕಾರಣ ಅದು ಲಾಟರಿ ಎಂದು ನಾವು ಅಂದುಕೊಂಡಿರುತ್ತೇವೆ. 1 ನೇ ಆರೋಪಿ ಅಲ್ಲಿ ನಿಂತುಕೊಂಡು ಲಕ್ಕಿ ನಂಬರ್ ಬರುವವರಿಗೆ ಬಹುಮಾನ ಕೊಡುವುದಾಗಿ ಹೇಳುತ್ತಿದ್ದ. ಆಗ 1 ನೇ ಆರೋಪಿ ಯಾರಿಂದಲೂ ಹಣ ಪಡೆದಿದ್ದು ಇರುವುದಿಲ್ಲ. ಲಾಟರಿ ವ್ಯವಹಾರ ಆಗಬೇಕಾದರೆ ಹಣದ ವ್ಯವಹಾರ ಆಗಬೇಕು ಎಂದರೆ ಸರಿ. ನಮಗೆ ಕಾಣುವ ಹಾಗೆ ಯಾವದೇ ಹಣದ ವ್ಯವಹಾರ ಆಗಿರುವುದಿಲ್ಲ. ದೂರಿನಲ್ಲಿ ನಾವು ಜನಶ್ರೀ ಗ್ರೂಪ್ ಬಗ್ಗೆ ನಮೂದು ಮಾಡಿಸಿರುತ್ತೇವೆ. ಅಲ್ಲಿ ಸಿಕ್ಕಂತಹ ದಾಖಲಾತಿಯನ್ನು ನೋಡಿ ಅದು ನೊಂದಾಯಿತವಾಗಿದೆ ಎಂದು ನಾನು ಬರೆದಿರುತ್ತೇನೆ. ಆ ಸಮಯದಲ್ಲಿ

ಆ ಬಗ್ಗೆ ನಾನು ವಿಚಾರಣೆ ಮಾಡಿರುವುದಿಲ್ಲ. ಸದ್ರಿ ವಸ್ತುಗಳನ್ನು ಬಹುಮಾನಕ್ಕಾಗಿ ಇಟ್ಟಿದ್ದೆವು ಎಂದು ನನಗೆ 1 ನೇ ಆರೋಪಿ ಹೇಳಿರುತ್ತಾನೆ. ಎಂ ಒ 1, 1 ನೇ ಆರೋಪಿಯ ಹತ್ತಿರವೇ ಇತ್ತು. ಮುದ್ದೆಮಾಲುಗಳಿಗೆ ಬಿಳಿ ಬಟ್ಟೆ ಸುತ್ತಿ ಇಲಾಖಾ ಮೊಹರು ಹಾಕಿ ಪಂಚರ ಸಹಿ ಪಡೆದಿದ್ದು ಇರುವುದಿಲ್ಲ. ಜನಶ್ರೀ ಸಂಘದಲ್ಲಿ ಒಟ್ಟೂ ಎಷ್ಟು ಜನ ಸದಸ್ಯರಿದ್ದಾರೆ ಎಂದು ನಾನು ವಿಚಾರಣೆ ಮಾಡಿರುವುದಿಲ್ಲ. ಜನಶ್ರೀ ಸಂಘ ನೊಂದಾಯಿತವಾಗಿದ್ದು ಕಂತಿನ ಮೂಲಕ ಅದರ ಸದಸ್ಯರಿಗೆ ಮಾತ್ರ ವಸ್ತುಗಳನ್ನು ನೀಡುತ್ತಿದ್ದರು ಎಂದರೆ ಸರಿಯಲ್ಲ. ಎಂ ಒ 3 ರ ಮೇಲೆ ಕಂತಿನ ಪ್ರಕಾರ ಎಷ್ಟು ಹಣ ತುಂಬಬೇಕು ಎಂದು ಬರೆಯಲಾಗಿದೆ ಎಂದರೆ ಸರಿ. ಎಂಒ 4 ರಲ್ಲಿ ಯಾರ್ಯಾರು ಸದಸ್ಯರು ಮತ್ತು ಎಷ್ಟೆಷ್ಟು ಕಂತು ತುಂಬಬೇಕು ಎಂದು ಮಾಹಿತಿ ಬರೆದಿದ್ದಾರೆ ಎಂದರೆ ಸರಿ. ಗೃಹಬಳಕೆ ವಸ್ತುಗಳನ್ನು ಗ್ರಾಹಕರಿಗೆ ಕಂತಿನ ಪ್ರಕಾರ ಕೊಡಲು ತಂದಿದ್ದು ಸಿಪಿಐ ಕುಮಾರಸ್ವಾಮಿ ರವರ ಮಾತು ಕೇಳಿ ನಾನು ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಎಂ ಒ 1 ಲಾಟರಿ ಕೂಪನ್ ಗಳನ್ನು ಸ್ಥಳದಿಂದ ವಶಕ್ಕೆ ಪಡೆದಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ವಶಕ್ಕೆ ಪಡೆದ ವಸ್ತುಗಳಿಗೆ ಪಂಚರ ಚೀಟಿ ಅಂಟಿಸಿದ್ದು ಇರುವುದಿಲ್ಲ. ಚಾಸಾ 2 ಮತ್ತು 3 ರವರು ಸದ್ರಿ ಸಂಘದ ಸದಸ್ಯರಾಗಿದ್ದು ಅವರು ಕೂಡಾ ಈ ಪ್ರಕರಣದಲ್ಲಿ ಆರೋಪಿತರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ಪಂಚನಾಮೆ ಮಾಡುವ ಸಮಯದಲ್ಲಿ ಆ ವಿಚಾರ ನನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. 1 ನೇ ಆರೋಪಿ ಬೈಲಾ ಪ್ರತಿಗಳನ್ನು ನನಗೆ ತೋರಿಸಿದರೂ ಸಹಾ ಉದ್ದೇಶಪೂರ್ವಕವಾಗಿ ಅವರ ವಿರುದ್ಧ ಈ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆದ್ದರಿಂದ ನ್ಯಾಯಾಲಯ ತಕ್ಷಣ ಜಾಮೀನು ನೀಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

Sd/-

ಪ್ರ ದ ನ್ಯಾದಂ ಹೊನ್ನಾವರ.